ಶ್ರೀ ಬಿ. ಧರ್ಮಪ್ಪ.—ಈ ಭದ್ರಾ ಯೋಜನೆಯಲ್ಲಿ ಮುಳುಗಡೆಯಾದ ರೈತರೇ ಆಲ್ಲಿ ಬಂದು ವಾಸವಾಗಿದ್ದಾರೆ. ಆವೊತ್ತಿನಿಂದ, ಈವತ್ತಿನವರೆಗೂ ಈ ಜನರಿಗೆ ಅನುಕೂಲ ಮಾಡಿಕೊಡುತ್ತೇವೆಂದೂ ಆಶ್ವಾಸನೆಯನ್ನು ಕೊಟ್ಟುಕೊಂಡೇ ಬಂದಿದ್ದಾರೆ. ಆವೊತ್ತು ೧೦-೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಅನುಕೂಲವಾಗುವಂತಹ ಯೋಜನೆಗೆ ಇವೊತ್ತು ೩೫-೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಂತಹ ಪರಿಸ್ಥಿತಿಗೆ ಬಂದಿದೆ. ಆದ್ದರಿಂದ ಈಗಲಾದರೂ ಅದರ ಬಗ್ಗೆ ಆ ಜನರಿಗೆ ಸಹಾಯ ಮಾಡುವ ಬಗ್ಗೆ ಯೋಚನೆ ಮಾಡುತ್ತೀರಾ ? ಶಿವಮೊಗ್ಗ ತಾಲ್ಲೂಕಿನಲ್ಲಿ ಕೋರಲಹಳ್ಳಿ, ಆಕ್ಷೆಣಕೊಪ್ಪದ ಜನರೂ ಕೂಡ ಡ್ರೈ ಲ್ಯಾಂಡ್ ಭೂಮಿಯನ್ನೇ ಅವಲಂಬಿಸಿಕೊಂಡು ಜೀವನ ಮಾಡುತ್ತಿದ್ದಾರೆ. ನರಸಿಂಹರಾಜಪುರದಿಂದ ಬಂದಿರತಕ್ಕಂತಹ ಜನರೇ ಜಾಸ್ತಿ ಇದ್ದಾರೆ. ಆದ್ದರಿಂದ ಇದರ ಬಗ್ಗೆ ಆದ್ಯತೆಯನ್ನು ಕೊಟ್ಟು ಕೆಲಸ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹಿಂದೆ ಈ ಬಗ್ಗೆ ಒಂದು ಸಭೆಯೂ ನಡೆದು ಈ ಯೋಜನೆಯನ್ನು ಕೈಬಿಡಬೇಕೆಂದು ನಿರ್ಣಯವಾಗಿತ್ತು. ಆದರೆ ಇದನ್ನು ಪುನಃ ಪರಿಶೀಲನೆ ಮಾಡಲಾಗುತ್ತಿದೆ. ಇದಕ್ಕೆ ೧೭ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈ ಜನರಿಗೆ ಅನುಕೂಲವನ್ನು ಒದಗಿಸಬೇಕಾದರೆ ೧೭ ಕ್ಯೂಸೆಕ್ಸ್ ನೀರು ಬೇಕಾಗಿದೆ. ಸರ್ಕಾರ ಇದರ ಬಗ್ಗೆ ಆದಷ್ಟು ಬೇಗ ನಿರ್ಣಯವನ್ನು ಕೈಗೊಳ್ಳುತ್ತದೆ.

ವಿವಿಧ ಇಲಾಖೆಗಳಲ್ಲಿ ಗುತ್ತಿಗೆದಾರರಿಗೆ ಪಾವತಿ ಮಾಡಬೇಕಾಗಿರುವ ಮೊತ್ತ.

೧೨೬೧. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೀರಾವರಿ, ವಿದ್ಯುಚ್ಛಕ್ತಿ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ೧-೩-೮೮ ರಂದು ಸರ್ಕಾರದಿಂದ ಗುತ್ತಿಗೆದಾರರಿಗೆ ಪಾವತಿಯಾಗದೆ ಉಳಿದಿರುವ ಹಣವೆಷ್ಟು? (ಕಳೆದ ಮೂರು ವರ್ಷಗಳ ವಿವರಗಳನ್ನು ಇಲಾಖಾವಾರು ಕೊಡತಕ್ಕದ್ದು)

ಆ) ೧-೩-೮೮ ರವರೆಗೆ ಪಾವತಿ ಮಾಡಿದ ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ನೀರಾವರಿ ಮಂತ್ರಿಗಳು).—

ಅ) ೧-೩-೮೮ ರಂದು ಗುತ್ತಿಗೆದಾರರಿಗೆ ಪಾವತಿಯಾಗದೆ ಉಳಿದಿರುವ ಹಣದ ವಿವರಗಳು ಕೆಳಕಂಡಂತಿದೆ.

ನೀರಾವರಿ ವಲಯಗಳಲ್ಲಿ	...	೫೧.೦೧ ಕೋಟಿ ರೂ.ಗಳು
ಸಂಪರ್ಕ ಮತ್ತು ಕಟ್ಟಡ ವಲಯಗಳಲ್ಲಿ	...	೧೪.೪೬ ಕೋಟಿ ರೂ.ಗಳು
ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ	...	೩.೪೦ ಕೋಟಿ ರೂ.ಗಳು
ಒಟ್ಟು		೬೮.೮೭ ಕೋಟಿ ರೂ.ಗಳು.

ಆ) ೧-೩-೧೯೮೮ ರವರೆಗೆ ಯೋಜನಾ ಹಾಗೂ ಯೋಜನೇತರ ಕಾಮಗಾರಿಗಳ ಮೇಲೆ ವಹಾಡಿದ ವೆಚ್ಚ ಕೆಳಕಂಡಂತಿದೆ.

ನೀರಾವರಿ ವಲಯಗಳಲ್ಲಿ	...	೧೫೯.೯೭ ಕೋಟಿ ರೂ.ಗಳು
ಸಂಪರ್ಕ ಮತ್ತು ಕಟ್ಟಡ ವಲಯಗಳಲ್ಲಿ	...	೩೬.೮೭ ಕೋಟಿ ರೂ.ಗಳು
ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ	...	೧೭.೩೮ ಕೋಟಿ ರೂ.ಗಳು
ಒಟ್ಟು		೨೧೪.೨೨ ಕೋಟಿ ರೂ.ಗಳು

ಆಮೇಲೆ ಏಪ್ರಿಲ್‌ನಲ್ಲಿ ಇದರಲ್ಲಿ ಹೆಚ್ಚು ಪಾವತಿ ಮಾಡಲಾಗಿದೆ. ಆ ಪಾವತಿಯಾದ ವಿವರ ಈ ರೀತಿ ಇದೆ. ೧–೪–೮೮– ನೀರಾವರಿ ವಲಯದಲ್ಲಿ ಪಾವತಿ ಮಾಡದೇ ಇರತಕ್ಕ ಬಾಕಿ ೨೧.೯೬ ಕೋಟಿ ರೂಪಾಯಿಗಳು. ೫೧ ಕೋಟಿ ರೂಪಾಯಿಗಳಲ್ಲಿ ೩೦ ಕೋಟಿ ರೂಪಾಯಿಗಳ ಪೇಮೆಂಟ್ ಆಗಿದೆ. ಸಂಪರ್ಕ ಮತ್ತು ಕಟ್ಟಡ ವಲಯದಲ್ಲಿ ೧೫.೭೮ ಕೋಟಿ ರೂಪಾಯಿ. ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ ನಿಲ್ ಬ್ಯಾಲೆನ್ಸ್ ೧–೪–೮೮ರಂದು ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಯೇ ಒಂದಾದರೆ ಇವರು ಕೊಟ್ಟಿರುವ ಉತ್ತರವೇ ಇನ್ನೊಂದು. ನನ್ನ ಮೊದಲ ಪ್ರಶ್ನೆ.

> "the amount outstanding for payments by Government to the contractors as on 1-3-88 on various works in Irrigation Department, Electricity Department and Communication & Buildings Department (Year-wise and Department-wise information for the last three years may be given.")

ಎಂದು ಕೇಳಿದ್ದೇನೆ. ಇದರಲ್ಲಿ ಇವರು ನೀರಾವರಿ ವಲಯ, ಸಂಪರ್ಕ ಮತ್ತು ಕಟ್ಟಡ ವಲಯ ಹಾಗೂ ರಾಷ್ಟ್ರೀಯ ಹೆದ್ದಾರಿ ವಲಯದ ಬಗ್ಗೆ ಕೊಟ್ಟಿದ್ದಾರೆ. ನಾನು ಮೂರು ವರ್ಷಕ್ಕೆ ಎಷ್ಟು ಎಂದು ವಿವರವನ್ನು ಕೇಳಿದ್ದೇನೆ. ೧–೨–೮೮ರವರೆಗೆ ಹಿಂದಿನ ೩ ವರ್ಷ, ಎಷ್ಟೆಷ್ಟು ಔಟ್ ಸ್ಟ್ಯಾಂಡಿಂಗ್ ಬಾಕಿ ಇದೆ ಎಂದು ನಾನು ಕೇಳಿದ್ದೇನೆ. ಅದರ ವಿವರವನ್ನು ಕೊಟ್ಟಿಲ್ಲ. ಎರಡನೆಯದಾಗಿ, ೧–೩–೮೮ರ ವರೆಗೆ ಯೋಜನೆ ಹಾಗೂ ಯೋಜನೇತರ ಕಾಮಗಾರಿಗಳ ಮೇಲೆ ಮಾಡಿದ ವೆಚ್ಚ ಕಳಕಂಡಂತಿದೆ ಎಂದು ಹೇಳಿದ್ದೀರಿ. ನಾನು ಈಗ ಎಷ್ಟು ವೆಚ್ಚವನ್ನು ಮಾಡಿದ್ದೀರಿ ಎಂದು ಕೇಳಿಲ್ಲ. ನೇರವಾದ ನನ್ನ ಪ್ರಶ್ನೆ ಏನೆಂದರೆ, ಎಷ್ಟು ಕಾಂಟ್ರಾಕ್ಟರಿಗೆ ಹಣ ಬಾಕಿ ಇದೆ? ಎಷ್ಟು ಹಣವನ್ನು ಅವರಿಗೆ ಕೊಡಬೇಕಾಗಿದೆ? ಎಷ್ಟು ಹಣವನ್ನು ಕೊಟ್ಟಿದ್ದೀರಿ? ಎಷ್ಟು ಉಳಿದಿದೆ ಎನ್ನುವುದರ ಬಗ್ಗೆ ೩ ವರ್ಷಗಳ ವಿವರವನ್ನು ಕೇಳಿದ್ದೇನೆ. ನಾನು ವೆಚ್ಚವನ್ನು ಕೇಳಿಲ್ಲ ದಯವಾಡಿ ಹೇಳುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮೂರು ವರ್ಷದ ಆಪ್ಶೆರು ಇಷ್ಟು ಇದೆ. ನಾನು ಕೊಟ್ಟಿರುವ ಉತ್ತರ ಸರಿಯಾಗಿಯೇ ಇದೆ. ೧–೩–೮೮ರಂತೆ ಹಿಂದಿನದನ್ನು ಕೊಡಲಾಗಿದೆ. ಕೊಟ್ಟು ಬಾಕಿ ಉಳಿದಿರುವುದನ್ನು ಹೇಳಲಾಗಿದೆ. ನೀರಾವರಿ ವಲಯದಲ್ಲಿ ೧–೩–೮೮ರಲ್ಲಿ ೫೧ ಕೋಟಿ ರೂಪಾಯಿ ಇದ್ದುದು ೧–೪–೮೮ರಲ್ಲಿ ೨೦ ಕೋಟಿ ರೂಪಾಯಿ ಆಗಿದೆ. ಒಂದು ತಿಂಗಳಲ್ಲಿ ಇಷ್ಟು ಆಗಿದೆ. ಸಂಪರ್ಕ ಮತ್ತು ಕಟ್ಟಡದಲ್ಲಿ ೧೬.೪೪ ಕೋಟಿ ಇದ್ದುದು ೧೫.೭೮ ಕೋಟಿ ರೂಪಾಯಿ ಆಗಿದೆ. ಇದರಲ್ಲಿ ಸ್ವಲ್ಪ ಹೆಚ್ಚು ಇದೆ. ರಾಷ್ಟ್ರೀಯ ಹೆದ್ದಾರಿ ವಲಯದಲ್ಲಿ ಎಲ್ಲಾ ಕೊಡಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ವಿದ್ಯುಚ್ಛಕ್ತಿಯ ಬಗ್ಗೆ ತಾವು ಹೇಳಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ನನಗೆ ಬರುವುದಿಲ್ಲ, ಲೋಕೋಪಯೋಗಿಯಲ್ಲಿ ವಿದ್ಯುತ್ ಬರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ನಮಗೆ ಹೇಗೆ ತಿಳಿಯಬೇಕಂ? ತಾವುಗಳು ಹೊಂದಾಣಿಕೆಯಿಂದ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲಿನಿಂದಲೂ ವಿದ್ಯುತ್ ಖಾತೆ ಜೆ. ಹೆಚ್. ಪಟೇಲರಲ್ಲಿದೆ. ಆ ಇಲಾಖೆಯ ವಿವರಗಳನ್ನೂ ನಾನು ಕೊಡಿಸುತ್ತೇನೆ. ನೀರಾವರಿ, ಸಂಪರ್ಕ, ರಾಷ್ಟ್ರೀಯ ಹೆದ್ದಾರಿ ಬಗ್ಗೆ ವಿವರವನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಕೊಟ್ಟಿಲ್ಲ ಎಂದು ನಾನು ಹೇಳುತ್ತಿದ್ದೇನೆ. ೧–೩–೮೮ರ ವರೆಗೆ ಹಿಂದೆ ಮೂರು ವರ್ಷದ ಅಲಾಯಿದ, ಎಷ್ಟೆಷ್ಟು ಬಾಕಿ ಇತ್ತು ಎಷ್ಟೆಷ್ಟು ಕೊಟ್ಟಿದ್ದೀರಿ ಎಂದು ಕೇಳಿದ್ದರೆ, ೧–೩–೮೮ಕ್ಕೆ ಇಷ್ಟು ಬಾಕಿ ಇದೆ ಎಂದು, ಇಷ್ಟು ಬಾಕಿ ಕೊಟ್ಟಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ ಅದು ಸರಿಯಿಲ್ಲವೆಂದು ನಾನು ಹೇಳುತ್ತಿದ್ದೇನೆ. ಮಾಹಿತಿ ಇದ್ದರೆ ಕೊಡಿ, ಇಲ್ಲದಿದ್ದರೆ ಇಲ್ಲ ಎಂದು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಶ್ನೆ ಹೇಗಿದೆ ಹೋಡಿ. ನೀರಾವರಿ, ವಿದ್ಯುತ್ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ೧–೩–೮೮ರಂದು ಸರ್ಕಾರದಿಂದ ಗುತ್ತಿಗೆದಾರರಿಗೆ ಪಾವತಿಯಾಗದೆ ಉಳಿದಿರುವ ಹಣವೆಷ್ಟು.

ಶ್ರೀ ಬಿ. ಬಸವಲಿಂಗಪ್ಪ.—ಕಳೆದ ಮೂರು ವರ್ಷಗಳ ವಿವರವನ್ನು ಎಂದರೆ ಪ್ರತಿ ವರ್ಷದ ವಿವರವನ್ನು ನಾನು ಕೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಲೆಕ್ಕವನ್ನು ಕೊಡುತ್ತೇನೆ. ಕಾಂಟ್ರಾಕ್ಟರ್ಸ್‌ಗೆ ಕೊಟ್ಟಿದ್ದು, ಆರಿಯರ್ಸ್ ಎಷ್ಟು ಇದೆ ಎಂಬುದನ್ನು ಕೊಟ್ಟಿದ್ದೇನೆ. ನಾವು ಕಾಂಟ್ರಾಕ್ಟರ್ಸ್‌ಗೆ ಸಿಮೆಂಟ್ ಕೊಟ್ಟಿರುತ್ತೇವೆ, ಸ್ಟೀಲ್ ಕೊಟ್ಟಿರುತ್ತೇವೆ. ಇದನ್ನೆಲ್ಲಾ ಲೆಕ್ಕದಲ್ಲಿ ವಜಾ ಮಾಡಿ ಇನ್ನು ಉಳಿಕೆಯಂ ಹಣ ಏನಿದ ಅದಕ್ಕೆ ಪ್ರತಿಯಾಗಿ ಇಷ್ಟು ಹಣವನ್ನು ಕೊಟ್ಟಿದ್ದೇವೆ. ಮೂರು ವರ್ಷದ್ದು ಎಲ್ಲಾ ರೆಕಾರ್ಡ್ ಮಾಡಿ ೧–೩–೮೮ಕ್ಕೆ ಎಷ್ಟು ಬಾಕಿ ಇತ್ತು, ೧–೪–೮೮ಕ್ಕೆ ಎಷ್ಟು ಕೊಟ್ಟಿದ್ದೇವೆನ್ನುವ ವಿವರ ವನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಉತ್ತರ ಹೇಳಿದ್ದೀರಿ, ಹೊಸದಾಗಿ ಪೊರ್ಟ್‌ಪೊಲಿಯೋ ಬಂದಿದೆ ನಿಮಗೆ ಅರಿವು ಈಗ ಆಗಿದೆ. ನಮಗೆ ೨೦–೩೦ ವರ್ಷಗಳಿಂದ ಗೊತ್ತಿದೆ ನಿಮ್ಮ ಕಂಟ್ರಾಕ್ಟರ್ಸ್ ಮಾಡುವ ಕೆಲಸ, ಅಧಿಕಾರಿಗಳು ಮಾಡುವ ಕೆಲಸ, ಎಷ್ಟು ಸಿಮೆಂಟ್ ಸೇರಿಸಬೇಕು ಎಷ್ಟು ಮರಳು ಸೇರಿಸಬೇಕೆನ್ನುವ ಬುದ್ಧಿವಾದವನ್ನು ಏತಕ್ಕೆ ಹೇಳುತ್ತಿದ್ದೀರಿ. ಬಾಕಿ ಕೆಲಸ ಎಷ್ಟು, ವರ್ಷಂಪ್ರತಿ ಎಷ್ಟು ಆಗುತ್ತಿದೆ, ಈ ವರ್ಷ ಎಷ್ಟಾಗಿದೆ ಎನ್ನುವ ವಿವರ ಕೊಡಿ ವಿವರಗಳು ಇಲ್ಲದಿದ್ದರೆ ಟೈಮ್ ತೆಗೆದುಕೊಂಡು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಣವನ್ನು ಕೊಟ್ಟಿದ್ದೇವೆ. ೧–೩–೮೮ಕ್ಕೆ ಎಷ್ಟು ಬಾಕಿ ಇತ್ತು. ೧–೪–೮೮ಕ್ಕೆ ಎಷ್ಟು ಕೊಟ್ಟಿದ್ದೇವೆ ಎನ್ನುವ ವಿವರ ಹೇಳಿದ್ದೇನೆ. All arrears have been paid.

ಶ್ರೀ ಎಂ. ವೀರಪ್ಪ ಮೊಯಿಲಿ.—೧೯೮೭–೮೮ಕ್ಕೆ ನೀರಾವರಿ ಬಲಯಕ್ಕಾಗಿ ಯೋಜನೆ ಮತ್ತು ಯೋಜನೇತರ ಕೆಲಸ ಕಾರ್ಯಗಳಿಗೆ ಅಲೋಕೇಷನ್ ಮಾಡಿದ್ದೀರಿ, ಅಲೋಕೇಷನ್ ಮಾಡಿರತಕ್ಕ ೧೫೯.೬೭ ಕೋಟಿ ರೂಪಾಯಿಗಳಲ್ಲಿ ಪ್ಲಾನ್‌ಗೆ ಎಷ್ಟು ಖರ್ಚು ಮಾಡಿದ್ದೀರಿ, ನಾನ್‌ಪ್ಲಾನ್‌ಗೆ ಎಷ್ಟು ಖರ್ಚು ಮಾಡಿದ್ದೀರಿ, ಸಿಬ್ಬಂದಿಗೆ ಎಷ್ಟು ಖರ್ಚು ಮಾಡಿದ್ದೀರಿ ವರ್ಕ್ಸ್‌ಗೆ ಎಷ್ಟು ಮಾಡಿದ್ದೀರಿ ಅದರ ವಿವರ ಕೊಡಬಹುದೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ವಿವರ ನನ್ನ ಹತ್ತಿರವಿಲ್ಲ, ಬೇರೆ ನೋಟೀಸ್ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇವೆಲ್ಲ ಬೇಸಿಕ್ ಮೆಟೀರಿಯಲ್ಸ್, ಈ ಒಂದು ಫಿಗರ್ಸ್ ಬರ ಬೇಕಾದರೆ ಪ್ಲಾನ್‌ಗೆ ಎಷ್ಟು ಖರ್ಚಾಗಿವೆ, ನಾನ್‌ಪ್ಲಾನ್‌ಗೆ ಇಷ್ಟು ಖರ್ಚಾಗಿದೆ ಎನ್ನುವುದೆಲ್ಲಾ ಗೊತ್ತಿರಲೇಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಆ ವಿವರ ಕೊಡಲಿಕ್ಕೆ ತಯಾರಾಗಿದ್ದೇನೆ. ಬಜೆಟ್ ಪ್ರಾವಿಜನ್ ಎಷ್ಟು, ಸಿಬ್ಬಂದಿಗೆ ಎಷ್ಟು ಖರ್ಚಾಗಿದೆ, ವರ್ಕ್ಸ್‌ಗೆ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳುತ್ತೇನೆ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾದು ಆರಿಯರ್ಸ್ ಬಗ್ಗೆ. ಬೇರೆ ಪ್ರಶ್ನೆ ಕೇಳಿದರೆ ವಿವರ ಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಉತ್ತರ ಇರಲೇಬೇಕು. ಪ್ಲಾನ್ ಮತ್ತು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಬಗ್ಗೆ ವಿವರ ಕೊಡಬೇಕು. ಸಿಬ್ಬಂದಿ ಮತ್ತು ವರ್ಕ್ಸ್‌ಗೆ ಎಷ್ಟು ಖರ್ಚಾಗಿದೆ ಎನ್ನುವ ವಿವರ ಇರಬೇಕು. ಇಲ್ಲದಿದ್ದರೆ ೧೫೯.೬೭ ಈ ಫಿಗರ್ ಹೇಗೆ ಬರುತ್ತದೆ? ಇದು ಫಿಕ್ಟೀಸಿಯೇಷನ್ ಫಿಗರ್. ಇದನ್ನು ನಾವು ಹೇಗೆ ನಂಬುವುದಕ್ಕೆ ಆಗುತ್ತದೆ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬಸವಲಿಂಗಪ್ಪನವರ ಕನ್ನಡದಲ್ಲಿರತಕ್ಕ ಪ್ರಶ್ನೆಯನ್ನು ನಾನು ಸರಿಯಾಗಿ ಅರ್ಥಮಾಡಿಕೊಂಡಿದ್ದೇನೆಂದು ಅವರು ಕೇಳಿರತಕ್ಕದ್ದು ೧–೩–೮೮ರಂದು ಸರ್ಕಾರದಿಂದ ಗುತ್ತಿಗೆದಾರರಿಗೆ ಪಾವತಿಯಾಗದೆ ಉಳಿದಿರುವ ಹಣವೆಷ್ಟು ಕಳೆದ ಮೂರು ವರ್ಷಗಳ ವಿವರಗಳನ್ನು ಇಲಾಖಾವಾರು ಕೊಡತಕ್ಕದ್ದು. ನಿಮಗೆ ಮೂರು ವರ್ಷಗಳ ಅಂಕಿಸಂಖ್ಯೆಗಳನ್ನು ಕೊಡಲಿಕ್ಕೆ ಕಷ್ಟ

ವಿರಬೇಕು. ನೀವು ನೀರಾವರಿ ವಲಯ, ಸಂಪರ್ಕ ಮಂತ್ರಿ ಕಟ್ಟಿಡ ವಲಯ ಹಾಗೂ ರಾಷ್ಟ್ರೀಯ ಹೆದ್ದಾರಿ ವಲಯಗಳಿಗೆ ಒಟ್ಟು ೬೮.೮೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅವರ ಮುಂದಿನ ಪ್ರಶ್ನೆ ಏನಿದೆ ಅಂದರೆ ೧-೩-೮೮ರ ವರೆಗೆ ಪಾವತಿ ಮಾಡಿದ ಹಣವೆಷ್ಟು ಎಂದು ಕೇಳಿದರೆ ನೀವು ಆ ವಿಚಾರ ಹೇಳಲಿಲ್ಲ. ಯೋಜನೆ ಮತ್ತು ಯೋಜನೇತರ ವೆಚ್ಚಕ್ಕೆ ಹೋಗಿದ್ದೀರಿ. Actually your answer is not apt to the question that is put by Hon. Member Sri Basavalingappa. ಅದಕ್ಕೋಸ್ಕರ ಇದು ಬಹಳ ಮುಖ್ಯ. ೧-೩-೮೮ರ ವರೆಗೆ ಎಷ್ಟು ಹಣವನ್ನು ಕಂಟ್ರಾಕ್ಟರುಗಳಿಗೆ ಕೊಟ್ಟಿದ್ದೀರಿ ಎಂದು ಹೇಳುವುದು ಬಹಳ ಒಳ್ಳೆಯದೂ ನಿಮ್ಮ ಉತ್ತರದಲ್ಲಿ ಅದು ಇಲ್ಲ ಈಗ ಆ ವಿವರ ಇಲ್ಲದಿದ್ದರೆ ಈ ಪ್ರಶ್ನೆಯನ್ನು ವಿತ್‌ಹೋಲ್ಡ್ ಮಾಡಿ. ನಿಮಗೆ ಹೊಸದಾಗಿ ಈ ಜವಾಬ್ದಿ ಬಂದಿದೆ ನೀವು ಕಾಲ ತೆಗೆದುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಕೇಳಿದ ಪ್ರಶ್ನೆಗೆ ಉತ್ತರ ಹೇಳುತ್ತೇನೆ.

MR. SPEAKER.—Half an hour discussion ಸೂಚನೆಯನ್ನು ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಆಗಬಹುದು. Half an hour discussion ಗೆ ಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದದ್ದು ಮಾನ್ಯ ಬಸವಲಿಂಗಪ್ಪನವರು ಹೇಳಿದ್ದುದು ಸರಿಯಾಗಿದೆ. ೬೮.೮೭ ಕೋಟಿ ಬಾಕಿ ಇದೆ. ಇದನ್ನು ಯಾವಾಗ ಕೊಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಇರಲಿಲ್ಲ, ನಾವು ಹೇಳಿದ್ದೇವೆ. ೧-೪-೮೯ರಲ್ಲಿ ಇರಿಗೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ ೫೮ ಕೋಟಿ ಇದ್ದದ್ದು ೨೧ ಕೋಟಿಯಾಗಿದೆ. ೩೧ ಕೋಟಿ ಕೊಟ್ಟಿದ್ದೇವೆ. ನ್ಯಾಷನಲ್ ಹೈವೇನಲ್ಲಿ ೪ ಕೋಟಿ ಎಲ್ಲಾ ಕೊಟ್ಟುಬಿಟ್ಟಿದ್ದೇವೆ. ಬಾಕಿ ಏನೂ ಇಲ್ಲ. ಬಿಲ್ಡಿಂಗ್ ಅಂಡ್ ಕಮ್ಯುನಿಕೇಶನ್‌ನಲ್ಲಿ ೧೫ ಕೋಟಿ ೭೮ ಲಕ್ಷ ಇದೆ. ಅದನ್ನು ಹೇಳಿದ್ದೇನೆ. ಆಮೇಲೆ ಇರಿಗೇಶನ್ ಡಿಪಾರ್ಟ್‌ಮೆಂಟಿನದ್ದು ಡಿಮ್ಯಾಂಡ್ಸ್ ಬರುತ್ತದೆ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ತಮಗೆ ಬೇಕಾದಷ್ಟು ಅವಕಾಶ ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರಿಗೆ ನಾನೂ ನೇರವಾಗಿ ಒಂದು ಪ್ರಶ್ನೆಯನ್ನು ಹಾಕಿದ್ದೇನೆ. ಕಂಟ್ರಾಕ್ಟರ್ಸ್‌ಗೆ ಎಷ್ಟು ಕೊಟ್ಟಿದ್ದೀರಿ. ಇಲಾಖೆಯ ಕೆಲಸಕ್ಕೆ ಎಷ್ಟು ಕೊಟ್ಟಿದ್ದೀರಿ ಎಂದು ಹೇಳುವುದಕ್ಕೆ ಆಗುತ್ತದೆಯೆ ? ಇಲ್ಲವೆಂದರೆ ಅರ್ಧಗಂಟೆ ಚರ್ಚೆಗೆ ಇದನ್ನು ತೆಗೆದುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಬಿಲ್ಡಿಂಗ್ ಡಿವಿಜನ್‌ನಲ್ಲಿ ೧೫ ಕೋಟಿಯೆಂದೇ ಇಟ್ಟುಕೊಳ್ಳಿ, ಇದನ್ನು ಯಾವಾಗ ಕೊಡುತ್ತೀರಿ ? ಈಗ ಮೂರು ನಾಲ್ಕು ವರ್ಷಗಳಿಂದ ಕೊಡುತ್ತೇವೆ ಎಂದು ಹೇಳಿ ಮುಂದೆ ಹಾಕಿಕೊಂಡೇ ಹೋಗುತ್ತಿದ್ದೀರಿ. ಇದನ್ನು ಯಾವಾಗ ಕ್ಲಿಯರ್ ಮಾಡುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಬೇಗ ಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಆದಷ್ಟು ಬೇಗ ಎಂದರೆ ಯಾವಾಗ ? ಒಂದು ವರ್ಷ ಆಗಬಹುದು, ಎರಡು ವರ್ಷ ಆಗಬಹುದು. ಇನ್ನು ಒಂದೆರಡು ತಿಂಗಳಲ್ಲಿ ಕ್ಲಿಯರ್ ಮಾಡುತ್ತೀರಾ ?

(ಉತ್ತರ ಇಲ್ಲ)

ಪ್ರಶ್ನೆ ೧೩೩೫—ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಹೆಜ್. ಕೌಜಲಗಿ ಹಾಜರಿರಲಿಲ್ಲ.